ಕರ್ನಾಟಕ ವಿಧಾನ ಸಭೆ

ಗುರುವಾರ 28 ನೇ ಡಿಸೆಂಬರ್ 1995 ರಂದು ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11-07 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : (ಶ್ರೀ ರಮೇಶ್ ಕುಮಾರ್) ಅವರು ಪೀಠವನ್ನು ಅಲಂಕರಿಸಿದ್ದರು.

ಸಂತಾಪ ಸೂಚನೆಗಳು

ಸಭಾಧ್ಯಕ್ಷರು :- ಹಾಲಿ ಲೋಕ ಸಭಾ ಸದಸ್ಯರಾಗಿದ್ದ ಶ್ರೀ ಬಿ. ಕೆ. ಗುಡದಿನ್ನಿ, ವಿಧಾನ ಸಭೆಯ ಮಾಜಿ ಸದಸ್ಯರುಗಳಾದ ಶ್ರೀ ಡಿ. ಜಯದೇವರಾಜೇ ಅರಸ್, ಶ್ರೀ ಸಿ. ಕಣ್ಣನ್, ಶ್ರೀ ಬಿ. ಎಸ್. ಶಂಕರಪ್ಪ, ಶ್ರೀ ಆರ್. ದಯಾನಂದರಾವ್, ಶ್ರೀ ಕೆ. ಜೆ. ತಿಮ್ಮೇಗೌಡ, ಶ್ರೀ ಬಿ. ಪಿ. ನಾಗರಾಜ ಮೂರ್ತಿ, ಪ್ರಜಾಪ್ರತಿನಿಧಿ ಸಭೆಯ ಮಾಜಿ ಸದಸ್ಯರುಗಳಾಗಿದ್ದ ಶ್ರೀ ಹೆಚ್. ಎಂ. ಗಂಗಾಧರಯ್ಯ, ಶ್ರೀ ಎನ್. ಪಿ. ಗೋವಿಂದ ಗೌಡ, ಕನ್ನಡದ ಖ್ಯಾತ ಲೇಖಿಕಿ ಶ್ರೀಮತಿ ಹೆಚ್. ವಿ. ಸಾವಿತ್ರಮ್ಮ ಹಾಗೂ ಹರಿಯಾಣ ರಾಜ್ಯದ ಸಿರ್ಸಾ ಜಿಲ್ಲೆಯ ಮಂಡಿದಬ್ಬಾಲಿಯಲ್ಲಿನ ಆಕಸ್ಮಿಕ ಬೆಂಕಿ ದುರಂತದಲ್ಲಿ ಅಸು ನೀಗಿದ ನೂರಾರು ಮುಗ್ಧ ಮಕ್ಕಳ ನಿಧನಕ್ಕೆ ಈ ಸದನವು ಅತ್ಯಂತ ವಿಷಾದ ವ್ಯಕ್ತ ಪಡಿಸುತ್ತದೆ.

1) ಹಾಲಿ ಲೋಕಸಭಾ ಸದಸ್ಯರಾಗಿದ್ದ ಶ್ರೀ ಬಿ. ಕೆ. ಗುಡದಿನ್ನಿ ಅವರು ದಿನಾಂಕ 1-12-1995 ರಂದು ನಿಧನರಾದರು.

ನಾಲ್ಕು, ಒಂಭತ್ತು ಹಾಗೂ ಪ್ರಸಕ್ತ ಹತ್ತನೇ ಲೋಕಸಭೆಯಲ್ಲಿ ಬಿಜಾಪುರ ಕ್ಷೇತ್ರವನ್ನು ಪ್ರತಿನಿಧಿಸಿದ್ದ ಶ್ರೀಯುತರು 1974 ರಿಂದ 1980 ಹಾಗೂ 1980 ರಿಂದ 1986 ರವರೆಗೆ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾಗಿದ್ದರು. ಪರಿಶಿಷ್ಟ ವರ್ಗದ ಬಾಲಕ-ಬಾಲಕಿಯರಿಗೆ ವಿದ್ಯಾರ್ಥಿ ನಿಲಯವನ್ನು ಸ್ಥಾಪಿಸಿ ಅವರ ಏಳಿಗೆಗಾಗಿ ಅಪಾರವಾಗಿ ಶ್ರಮಿಸಿ, ಬಿಜಾಪುರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಅಧ್ಯಕ್ಷರಾಗಿ ಮೈಸೂರು ರಾಜ್ಯ ಸಹಕಾರಿ ಗೃಹ ನಿಗಮದ ನಿರ್ದೇಶಕರಾಗಿ, ಡಾ : ಅಂಬೇಡ್ಕರ್ ಎಜುಕೇಷನ್ ಸೊಸೈಟಿ ಹಾಗೂ ಬಿಜಾಪುರದ ಜಿಲ್ಲಾ ಲಿಬರಲ್ ಎಜುಕೇಷನ್ ಸೊಸೈಟಿಯ ಉಪಾಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸಿದ್ದರು.

2) ವಿಧಾನ ಸಭೆಯ ಮಾಡಿ ಸದಸ್ಯರಾಗಿದ್ದ ಶ್ರೀ ಡಿ. ಜಯದೇವರಾಜೇ ಅರಸ್ ಅವರು ದಿನಾಂಕ 7-10-1995 ರಂದು ನಿಧನರಾದರು.

ಆರನೇ ವಿಧಾನ ಸಭೆಯನ್ನು ಮೈಸೂರು ಜಿಲ್ಲೆಯ ಚಾಮುಂಡೇಶ್ವರಿ ವಿಧಾನ ಸಭಾ ಕ್ಷೇತ್ರವನ್ನು ಪ್ರತಿನಿಧಿಸಿದ್ದ ಶ್ರೀಯುತರು 1956 ರಿಂದ 1962 ಹಾಗೂ 1972 ರಿಂದ 1978 ರವರೆಗೆ ವಿಧಾನ ಪರಿಷತ್ತಿನ ಸದಸ್ಯರಾಗಿ ಹಾಗೂ ಮೈಸೂರು ದಸರಾ ವಸ್ತುಪ್ರದರ್ಶನ ಸಮಿತಿಯ ಅಧ್ಯಕ್ಷರಾಗಿಯೂ ಕಾಯನಿರ್ವಹಿಸಿದ್ದರು.

3) ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಸಿ. ಕಣ್ಣನ್ ಅವರು ದಿನಾಂಕ 13-10-1995 ರಂದು ನಿಧನರಾದರು.

ಎಂಟನೆ ವಿಧಾನ ಸಭೆಗೆ ಬೆಂಗಳೂರಿನ ಶಾಂತಿನಗರ ವಿಧಾನ ಸಭಾ ಕ್ಷೇತ್ರವನ್ನು ಪ್ರತಿನಿಧಿಸಿದ್ದ ಶ್ರೀಯುತರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸದಸ್ಯರಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಅಭಿವೃದ್ಧಿಗಾಗಿ ಅವಿರತ ಸೇವೆ ಸಲ್ಲಿಸಿದ್ದರು.

4) ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಬಿ. ಎಸ್. ಶಂಕರಪ್ಪ ಅವರು ದಿನಾಂಕ 20-10-1995 ರಂದು, ನಿಧನರಾದರು.

ಎರಡನೇ ವಿಧಾನ ಸಭೆಗೆ ಹೊಸದುರ್ಗ ಕ್ಷೇತ್ರವನ್ನು ಪ್ರತಿನಿಧಿಸಿದ್ದ ಶ್ರೀಯುತರು ಚಿತ್ರದುರ್ಗ ಜಿಲ್ಲಾ ಬೋರ್ಡಿನ ಅಧ್ಯಕ್ಷರಾಗಿ, ಚಿತ್ರದುರ್ಗ ಜಿಲ್ಲೆಯ ಅಭಿವೃದ್ಧಿಗೆ ಅಪಾರ ವಾಗಿ ಸೇವೆ ಸಲ್ಲಿಸಿದ್ದರು.

5) ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಆರ್. ದಯಾನಂದರಾವ್ ಅವರು ದಿನಾಂಕ 12-12-1995 ರಂದು ನಿಧನರಾದರು.

ಒಂಭತ್ತನೇ ವಿಧಾನ ಸಭೆಗೆ ಬೆಂಗಳೂರಿನ ಗಾಂಧಿನಗರ ವಿಧಾನ ಸಭಾ ಕ್ಷೇತ್ರ ವನ್ನು ಪ್ರತಿನಿಧಿಸಿದ್ದ ಶ್ರೀಯುತರು ದೀನದಲಿತರ ಏಳಿಗೆಗಾಗಿ ಶ್ರಮಿಸಿದ್ದರು. ವೃತ್ತಿಯಲ್ಲಿ ಇಂಜಿನೀಯರಾದರೂ ಸಮಾಜ ಸೇವೆಯಲ್ಲಿಯೇ ತಮ್ಮನ್ನು ತೊಡಗಿಸಿಕೊಂಡಿದ್ದರು.

6) ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಕೆ. ಜಿ. ತಿಮ್ಮೇಗೌಡ ಅವರು ದಿನಾಂಕ 18-12-1995 ರಂದು ನಿಧನರಾದರು.

1952 ರಿಂದ 1957 ರವರೆಗೆ ಹಾಗೂ ನಾಲ್ಕನೇ ವಿಧಾನ ಸಭೆಗೆ ಕನಕಪುರ ವಿಧಾನ ಸಭಾ ಕ್ಷೇತ್ರದಿಂದ ಆಯ್ಕೆಯಾಗಿದ್ದ ಶ್ರೀಯುತರು 1964 ರಿಂದ 1970 ರವರೆಗೆ ವಿಧಾನ ಪರಿಷತ್ತಿನ ಸದಸ್ಯರಾಗಿಯೂ ಕಾರ್ಯ ನಿರ್ವಹಿಸಿದ್ದರು. ಕನಕಪುರದ ಪುರಸಭೆಯ ಅಧ್ಯಕ್ಷರಾಗಿ ಹತ್ತು ವರ್ಷಗಳ ಕಾಲ ಸೇವೆಯನ್ನು ಸಲ್ಲಿಸಿದ್ದರು. 1980 ರಿಂದ 1986 ರವರೆಗೆ ರಾಜ್ಯ ಸಭೆಯ ಸದಸ್ಯರಾಗಿಯೂ ಕಾರ್ಯನಿರ್ವಹಿಸಿದ್ದರು.

7) ವಿಧಾನ ಸಭೆಯ ಮಾಜಿ ಸದಸ್ಯರು ಹಾಗೂ ರಾಜ್ಯ ಸಭಾ ಸದಸ್ಯರಾಗಿದ್ದ ಶ್ರೀ ಬಿ. ಪಿ. ನಾಗರಾಜಮೂರ್ತಿ ಅವರು ದಿನಾಂಕ 6-10-1995 ರಂದು ನಿಧನರಾದರು.

1952 ರಿಂದ 1957 ರ ವರೆಗೆ ಮೊದಲನೇ ವಿಧಾನ ಸಭೆಯ ಸದಸ್ಯರಾಗಿದ್ದ ಶ್ರೀಯುತರು ರಾಜ್ಯ ಸಭಾ ಸದಸ್ಯರಾಗಿಯೂ ಕಾರ್ಯನಿರ್ವಹಿಸಿದ್ದು, ಮಂಡ್ಯ ಜಿಲ್ಲೆಯ ಅಭಿವೃದ್ಧಿಗೆ ಅಪಾರವಾಗಿ ಶ್ರಮಿಸಿದ್ದರು.

8) ಪ್ರಜಾ ಪ್ರತಿನಿಧಿ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಹೆಚ್. ಎಂ. ಗಂಗಾ ಧರಯ್ಯ ಅವರು ದಿನಾಂಕ 5-12-1995 ರಂದು ನಿಧನರಾದರು.

1945 ರಿಂದ 1949 ರ ಅವಧಿಯಲ್ಲಿ ಪ್ರಜಾ ಪ್ರತಿನಿಧಿ ಸಭೆಯ ಸದಸ್ಯರಾಗಿದ್ದ ಶ್ರೀಯುತರು 1952 ರಿಂದ 1958 ರವರೆಗೆ ವಿಧಾನ ಪರಿಷತ್ತಿನ ಸದಸ್ಯರಾಗಿಯೂ ಕಾರ್ಯ ನಿರ್ವಹಿಸಿದ್ದರು. ಹಿರಿಯ ಸ್ವಾತಂತ್ರ್ಯ ಯೋಧರು, ಸಮಾಜ ಸೇವಕರು ಹಲವಾರು ಶಿಕ್ಷಣ ಸಂಸ್ಥೆಗಳ ಸ್ಥಾಪಕರಾಗಿದ್ದ ಶ್ರೀಯುತರು ಸಮಾಜ ಸೇವೆಗಾಗಿ ರಾಜ್ಯ ಪ್ರಶಸ್ತಿಯನ್ನು ಪಡೆದಿದ್ದರು.

9) ಪ್ರಜಾ ಪ್ರತಿನಿಧಿ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಎನ್. ಪಿ. ಗೋವಿಂದೇ ಗೌಡ ಅವರು ದಿನಾಂಕ 17-10-1995 ರಂದು ನಿಧನರಾದರು.

1940 ರಿಂದ 1945 ರವರೆಗೆ ಪ್ರಜಾ ಪ್ರತಿನಿಧಿ ಸಭೆಯ ಸದಸ್ಯರಾಗಿ, 1952 ರಿಂದ 1958 ರ ವರೆಗೆ ವಿಧಾನ ಪರಿಷತ್ತಿನ ಸದಸ್ಯರಾಗಿ ಹಾಗೂ ಚಿಕ್ಕಮಗಳೂರು ಜಿಲ್ಲಾ ಬೋರ್ಡಿನ ಅಧ್ಯಕ್ಷರಾಗಿಯೂ ಅಪಾರ ಸೇವೆ ಸಲ್ಲಿಸಿದ್ದರು.

10) ಕನ್ನಡದ ಖ್ಯಾತ ಲೇಖಕಿ ಶ್ರೀಮತಿ ಹೆಚ್. ವಿ. ಸಾವಿತ್ರಮ್ಮ ಅವರು ದಿನಾಂಕ 27-12-1995 ರಂದು ನಿಧನರಾದರು.

ಕಾಂದಬರಿಗಾರ್ತಿಯಾಗಿ, ಅನುವಾದಕಿಯಾಗಿ, ಸಣ್ಣ ಕತೆಗಾರ್ತಿಯಾಗಿ ಸ್ತ್ರೀವಾದಿ ಚಿಂತನೆಗೆ ತಮ್ಮ ಸೃಜನಶೀಲ ಕೃತಿಗಳಿಂದ ಮಹತ್ತರ ಕಾಣಿಕೆಯನ್ನು ನೀಡಿದ ಸಾವಿತ್ರಮ್ಮ ನವರಿಗೆ ಕನ್ನಡ ಸಾಹಿತ್ಯಕ್ಕೆ ನೀಡಿದ ಕೊಡುಗೆಗಾಗಿ 1975 ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು, ಆಂಟನ್ ಚೆಕಾವ್ ಅವರ ಕೃತಿಯೊಂದರ ಅನುವಾದವಾದ 'ಮದುವಣ ಗಿತ್ತಿ'ಗೆ 1965 ರ ಸೋವಿಯತ್ ಲ್ಯಾಂಡ್ ನೆಹರೂ ಪ್ರಶಸ್ತಿಯನ್ನೂ, 1992 ರಲ್ಲಿ ಕರ್ನಾಟಕ ಲೇಖಕಿಯರ ಸಂಘದ 'ಅನುಪಮ' ಪ್ರಶಸ್ತಿಯನ್ನೂ ನೀಡಲಾಗಿತ್ತು.

11) ಹರಿಯಾಣ ರಾಜ್ಯದ ಸಿರ್ಸಾ ಜಿಲ್ಲೆಯ ಮಂಡಿ ದಬ್ವಾಲಿ ಪಟ್ಟಣದಲ್ಲಿರುವ ದೇವ್ ಸರ್ಕಾರಿ ಶಾಲೆಯ ಸಮಾರಂಭದಲ್ಲಿ ಸಂಭವಿಸಿದ ಆಕಸ್ಮಿಕ ಬೆಂಕಿ ದುರಂತದಲ್ಲಿ ನಾಲ್ಕು ನೂರಕ್ಕೂ ಹೆಚ್ಚು ಮುಗ್ಧ ಮಕ್ಕಳು ದಿನಾಂಕ 23 ನೇ ಡಿಸೆಂಬರ್, 1995 ರಂದು ಅಸುನೀಗಿದರು. ಶಾಲಾ ಸಮಾರಂಭದಲ್ಲಿ ತಮ್ಮ ಪ್ರತಿಭೆಗಳಿಂದ ಅಪಾರ ಉತ್ಸುಕತೆ ಯಿಂದ ಭಾಗವಹಿಸಿದ ಮಕ್ಕಳು ಹಾಗೂ ತಮ್ಮ ಮಕ್ಕಳ ಪ್ರತಿಭೆಯನ್ನು ಕಂಡು ಹರ್ಷಿ ಸಲು ಆಗಮಿಸಿದ ಹೆತ್ತ ತಂದೆ-ತಾಯಿಂದಿರು ಈ ಆಕಸ್ಮಿಕ ದುರಂತದಲ್ಲಿ ದುರ್ಮರಣ ಕ್ಕೀಡಾದುದು ಅತ್ಯಂತ ವಿಷಾದನೀಯ. ಹದಿನೈದು ವರ್ಷಗಳ ಹಿಂದೆ ಬೆಂಗಳೂರು ನಗರ ದಲ್ಲಿ ನಡೆದ ವೀನಸ್ ಸರ್ಕಸ್ ದುರಂತ ಈ ಘಟನೆಯನ್ನು ಪುನಃ ನಮ್ಮ ನೆನಪಿಗೆ ತರುತ್ತದೆ. ಅಸು ನೀಗಿದ ಮುಗ್ಧ ಮಕ್ಕಳಲ್ಲಿ ಯಾವ ಸುಪ್ತ ಪ್ರತಿಭೆ ಅಡಗಿತ್ತೋ ಮತ್ತು ಯಾವುದರ ಪೂರ್ಣಪ್ರಯೋಜನ ಈ ದೇಶಕ್ಕಾಗಿ ಲಭಿಸಬೇಕಾಗಿತ್ತೋ ಅದಕ್ಕೆ ಸಾಧ್ಯ ವಿಲ್ಲದೆ ಅರಳುವ ಮೊದಲೇ ಈ ಪ್ರತಿಭೆಗಳು ಅಂತ್ಯಗೊಂಡಿದ್ದು ಈ ದೇಶಕ್ಕೆ ಆದ ಅಪಾರ ನಷ್ಟವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ರಾಷ್ಟ್ರ ಇತ್ತೀಚಿನ ದಿನ ಗಳಲ್ಲಿ ವೀಕ್ಷಿಸಿದ ಅತ್ಯಂತ ಭೀಕರ ಘಟನೆಗಳಲ್ಲೊಂದಾಗಿ ಸೇರಿ ಹೋದ ಈ ಸಂದರ್ಭ ದಲ್ಲಿ ನಾವೆಲ್ಲರೂ ಎಚ್ಚೆತ್ತುಕೊಂಡು ಇಂತಹ ಸಭೆ-ಸಮಾರಂಭಗಳಲ್ಲಿ ಈ ರೀತಿಯ ಆಕಸ್ಮಿಕಗಳಿಗೆ ಅವಕಾಶಗಳಿಲ್ಲದಂತೆ ಮುಂಜಾಗ್ರತೆ ವಹಿಸುವುದು ಅತ್ಯಗತ್ಯವಾಗಿದೆ.

ಅಸು ನೀಗಿದ ಮುಗ್ಧ ಮಕ್ಕಳ ಆತ್ಮಕ್ಕೆ ಶಾಂತಿಯನ್ನು ಕೋರುತ್ತಾ ಈ ಭರಿಸ ಲಾಗದ ಶೋಕದಿಂದ ತತ್ತರಿಸಿರುವ ಕುಟುಂಬ ವರ್ಗಗಳವರಿಗೆ ಈ ದುಃಖವನ್ನು ಭರಿ ಸುವ ಶಕ್ತಿಯನ್ನು ಭಗವಂತ ಕೊಡಲೆಂದು ಪ್ರಾರ್ಥಿಸುತ್ತೇನೆ.

ಈಗ ಈ ಎಲ್ಲಾ ಮಹನೀಯರ ಗೌರವಾರ್ಥವಾಗಿ ಮಾನ್ಯ ಸದಸ್ಯರುಗಳೆಲ್ಲರೂ ಎದ್ದು ನಿಂತು ಒಂದು ನಿಮಿಷ ಮೌನ ಆಚರಿಸಬೇಕೆಂದು ಕೋರುತ್ತೇನೆ.

(ಸದನವು ಎದ್ದು ನಿಂತು ಮೃತರ ಗೌರವಾರ್ಥ ಒಂದು ನಿಮಿಷ ಮೌನವನ್ನು ಆಚರಿಸಿತು.)

ಈ ಸಂತಾಪ ಸೂಚನಾ ನಿರ್ಣಯವನ್ನು ಮೃತರ ಕುಟುಂಬವರ್ಗದವರಿಗೆ ಕಳುಹಿಸಿ ಕೊಡಲಾಗುವುದು.

ಈಗ ಸಭೆಯು ಮುಂದೂಡಲ್ಪಟ್ಟು ಮತ್ತೆ ಮಧ್ಯಾಹ್ನ 3-30 ಕ್ಕೆ ಸಮಾವೇಶ ಗೊಳ್ಳುವುದು.

(11 ಗಂಟೆ 15 ನಿಮಿಷಕ್ಕೆ ಸಭೆಯನ್ನು ಮುಂದೂಡಿ ಮತ್ತೆ ಮಧ್ಯಾಹ್ನ 3-30 ಕ್ಕೆ ಸಮಾವೇಶಗೊಳ್ಳಲು ನಿರ್ಧರಿಸಲಾಯಿತು.)

(ಸದನ ಮತ್ತೆ ಸಂಜೆ 5.20 ಗಂಟೆಗೆ ಸಮಾವೇಶಗೊಂಡಿತು, ಸಭಾಧ್ಯಕ್ಷ ರಾದ ಶ್ರೀ ರಮೇಶ್‌ಕುಮಾರ್‌ರವರು ಪೀಠವನ್ನಲಂಕರಿಸಿದರು)

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಅಧ್ಯಕ್ಷರೇ, ನಾನು ಒಂದು ನಿರ್ಣಯ ವನ್ನು ತಮಗೆ ಕಳುಹಿಸಿಕೊಟ್ಟಿದ್ದು, ಅದನ್ನು ಮಂಡಿಸುವುದಕ್ಕೆ ಅವಕಾಶ ಮಾಡಿಕೊಡ ಬೇಕೆಂದು ಕೇಳಿಕೊಳ್ಳುತ್ತೇನೆ.

ಕಾರ್ಯದರ್ಶಿಯವರ ವರದಿ

ಕಾರ್ಯದರ್ಶಿಯವರು :- ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರಿಂದ ಒಪ್ಪಿಗೆ ಪಡೆದಿ ರತಕ್ಕ ವಿಧೇಯಕಗಳ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ.

ರಾಜ್ಯಪಾಲರಿಂದ ಅಥವಾ ರಾಷ್ಟ್ರಪತಿಯವರಿಂದ ಒಪ್ಪಿಗೆಯನ್ನು ಪಡೆದಿರತಕ್ಕ ವಿಧೇಯಕಗಳ ಪಟ್ಟಿ :-

ಕ್ರಮ ಸಂಖ್ಯೆ	ವಿಧೇಯಕದ ಹೆಸರು	ಒಪ್ಪಿಗೆಯನ್ನು ಪಡೆದ ದಿನಾಂಕ	ಒಪ್ಪಿಗೆಯನ್ನು ನೀಡಿದವರು
೧.	ಕರ್ನಾಟಕ ವಿಧಾನ ಮಂಡಲರವರ ವೇತನಗಳ ನಿವೃತ್ತಿ ವೇತನಗಳ ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ ೧೯೯೫	೩೦-೪-೧೯೯೫	ರಾಜ್ಯಪಾಲರು